# ಗುದ್ದ - ಮುದ್ದ




ಎಳೆಯರ ಆಮೋದ

ಒಂದೂರಲ್ಲಿ ಇಬ್ಬರು ಇದ್ದರು
ಅಣ್ಣನ ಹೆಸರು ಗುದ್ದ
ಆತನಿಗೊಬ್ಬ ತಮ್ಮನು ಇದ್ದ
ತಮ್ಮನ ಹೆಸರು ಮುದ್ದ

ಅಣ್ಣನ ಕಂಡರೆ ತಮ್ಮಗೆ ಪ್ರೀತಿ
ಗುದ್ದಣ್ಣಾ ಓ ಗುದ್ದಣ್ಣ
ತಮ್ಮನ ಕೂಗಿಗೆ ಅಣ್ಣನು ರೇಗಿ
ಬೆನ್ನಿಗೆ ಡುಮ್ಮನೆ ಬಿದ್ದಣ್ಣ

ಡುಮ್ ಡುಮ್ ತಿಂದು ಸಾಕಾಗೋಗಿ
ಮುದ್ದನು ಅನುವನು ಗುದ್ದುತ್ತೀಯಾ ಗುದ್ದಾ
ಖಂಡಿತ ಅನ್ನುತ ಗುದ್ದನು ಹಾಕುವವ
ನಿನ್ನೊಂದ್ ಗುದ್ದನು ಶುದ್ದಾ

ಗುದ್ದಣ್ಣಾಂದರು ಗುದ್ದಾ ಅಂದರು
ಮುದ್ದನ ಬೆನ್ನಿಗೆ ಗುದ್ದೇ
ಊಟಕೆ ಕೂತರೆ ಗುದ್ದನ ಹೊಟ್ಟೆಗೆ
ಇಬ್ಬರ ರಾಗಿ ಮುದ್ದೆ!



# ಇಲಿ ಬೆಕ್ಕಿಗೆ ಹೇಳಿದ್ದು

ನನಗಿರಿಸಿದ್ದ ಕೊಬ್ಬರಿ ಚೂರಿಗೆ
ಆಶಿಸಿ ಬಿದ್ದಿಯ ಬೋನಿನ ಒಳಗೆ

ಅಲ್ಲಾದರು ಇರು ನೀ ಎಲ್ಲಾದರು ಇರು ನೀ
ಪಂಜಲಿ ಬಾರಿಸಿ ಸರಿಗಮ ಪದನೀ

ಕೊಬ್ಬಿದ ಇಲಿಯೆಂದು ಕಟುಕರು ಬಂದು
ನೀರಲಿ ನಿನ್ನನು ಮುಳುಗಿಸಿ ಕೊಂದು

ಬಿಸಾಕುವ ವರೆಗೆ ಬೋನಿನ ಒಳಗೆ
ನೀನಿರು ನಾನೂ ಇರುವೆನು ಹೊರಗೆ